# ಜನಪದ ತ್ರಿಪದಿಗಳಲ್ಲಿ 'ಗರತಿ' ಪರಿಕಲ್ಪನೆ

**ಡಾ. ರವಿಶಂಕರ್ ಎ.ಕೆ**
ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ
ಕ್ರಿಸ್ತು ಜಯಂತಿ ಕಾಲೇಜು ಸ್ವಾಯತ್ತ
ಕೆ. ನಾರಾಯಣಪುರ, ಬೆಂಗಳೂರು
ravishankar@kristujayanti.com

'ಗರತಿ' ಎಂಬ ಪದವನ್ನು ಆಧುನಿಕವಾಗಿ ಹೊಸ ಅರ್ಥಗಳೊಂದಿಗೆ ನಿರ್ವಚಿಸಿಕೊಂಡು ಅಧ್ಯಯನಮಾಡಬೇಕಿದೆ. ಭಾರತೀಯ ಸಮಾಜವು ಹೆಣ್ಣನ್ನು ಅರ್ಥೈಸಿಕೊಂಡು ಬಂದಿರುವ ಪರಂಪರೆಯು ಪರಸ್ಪರ ವಿರುದ್ಧವಾಗಿದೆ. 'ಹೆಣ್ಣು ಸಂಸಾರದ ಕಣ್ಣು' ಎನ್ನುವಾಗಲೇ ಆಕೆಯನ್ನು ಗೌರವಿಸುವ ಮನೆದೇವತೆ, ಗೃಹಿಣಿ, ಮಹಾಲಕ್ಷ್ಮಿ ಮೊದಲಾದ ಪದಗಳು ಗೃಹದಲ್ಲೇ ಉಳಿಸುತ್ತಾ ಎಲ್ಲಾ ಜವಾಬ್ದಾರಿಯನ್ನು ಆಕೆಯ ಕರ್ತವ್ಯವೆಂಬಂತೆ ಹೊರಿಸಿದ ಅಭಿಮುಖ ಸಿದ್ಧಾಂತಗಳು ಇಂದಿನ ಪ್ರಚಲಿತ ಪ್ರಶ್ನೆಗಳಾಗಿವೆ. ಸಾಹಿತ್ಯದ ಮುಕ್ಕಾಲುಪಾಲು ಅಧ್ಯಯನಗಳು ಹೆಣ್ಣು ಮತ್ತು ದಲಿತ ಶೋಷಣೆಗಳನ್ನು ಅತ್ಯಂತ ಗಂಭೀರವಾಗಿ ಅಧ್ಯಯನಮಾಡುತ್ತಿದೆ. ಇದರ ಬೇರುಗಳನ್ನು ಸರಿಯಾಗಿ ಅಧ್ಯಯನಮಾಡದಿದ್ದರೆ ಹೊಸ ಅರ್ಥಗಳಿಗೆ ಮೌಲ್ಯವಿರುವುದಿಲ್ಲ. ಜನಭಾಷೆಯ ಎಲ್ಲಾ ಸಾಹಿತ್ಯವು ಕ್ರಿ.ಪೂ ಮಿಗಿಲಾಗಿ ನಮ್ಮ ಜನಪದ ಸಾಹಿತ್ಯದಿಂದ ಬಂದಿರುವುದು. ಈ ಜನಪದ ಸಾಹಿತ್ಯವು ವಿಶ್ವದ ಎಲ್ಲಾ ಪರಿಸರದಲ್ಲೂ ಸೃಷ್ಟಿಯಾಗಿ ಅಲ್ಲಿನ ಜನರ ಪದವನ್ನು ಪರಂಪರೆಯಾಗಿಸುವಲ್ಲಿ ಯಶಸ್ವಿಯಾಯಿತು. ಈ ಜನಪದ ಬೇರುಗಳಲ್ಲಿ ಅಂದಂದಿನ ಬದುಕು ಮಿಳಿತವಾಗುತ್ತಾ ಬಂದರೂ, ಅಲ್ಲಿ ವಿಚಾರವೂ, ಮೌಢ್ಯವೂ ಸೇರುತ್ತಾ ಸಾಗಿತು. ಅನುಭವಿಗಳು ಅದನ್ನು ತಮ್ಮ ಜ್ಞಾನಕ್ಕೆ ಅನುಗುಣವಾಗಿ ಬದಲಿಸುತ್ತಾ ಬಂದರು. ವಿಚಾರವಂತಿಕೆಯಿಲ್ಲದ ಮನುಷ್ಯರು, ಮೌಢ್ಯವನ್ನು ಒಪ್ಪಿಕೊಳ್ಳುತ್ತಾ ಮುಂದುವರೆಸಿದರು. ಈ ಹಿನ್ನಲೆಯಲ್ಲಿ 'ಗರತಿ' ಎಂಬ ಪದವು ಒಂದು ಸಮುದಾಯದ ಶ್ರೇಷ್ಠತೆಯನ್ನೂ, ಮೌಢ್ಯವನ್ನು ಒಟ್ಟಿಗೆ ಜೊತೆಯಾಗಿಸಿಕೊಂಡು ಬೆಳವಣಿಗೆ ಪಡೆದಿದೆ. ಈ ಎಲ್ಲಾ ಅಂಶಗಳನ್ನು ವಿವಿಧ ಅಧ್ಯಯನಗಳ ಪರಿಶೀಲನೆಯೊಂದಿಗೆ ಹೊಸ ಅರ್ಥಗಳನ್ನು ಈ ಲೇಖನದಲ್ಲಿ ಅಧ್ಯಯನಮಾಡಲಾಗಿದೆ.

**ಪ್ರಮುಖ ಪದಗಳು :** ಗರತಿ, ಹೆಣ್ಣು, ಸಂಸಾರ

ಮೊದಲಿಗೆ ಗರತಿ ಎಂಬ ಪದದ ಅರ್ಥವನ್ನು ಚರ್ಚಿಸೋಣ. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಗರತಿ ಎಂದರೆ ಪತಿವ್ರತೆ, ಗೃಹಿಣಿ ಎಂಬ ಅರ್ಥಗಳನ್ನು ನೀಡಿದೆ. ವಿಕಿಪೀಡಿಯದಲ್ಲಿ ಗರತಿ ಎಂದರೆ ವಿವಾಹವಾದವಳು, ವಿವಾಹದ ನಂತರ ಹೆಣ್ಣು ತನ್ನ ಗಂಡ, ಮಕ್ಕಳು, ಅತ್ತೆ, ಮಾವ ಇನ್ನಿತರ ಸಂಬಂಧಗಳನ್ನು ನಿರ್ವಹಿಸುವುದೇ ಗರತಿಯ ಧರ್ಮ ಅಥವಾ ಪತಿವ್ರತೆಯ ಧರ್ಮ ಎನ್ನಲಾಗಿದೆ. ಅಮರಕೋಶವು ಸ್ತ್ರೀ ತನ್ನ ಪತಿಯೊಂದಿಗೆ ಅನನ್ಯವಾದ ಪ್ರೇಮವನ್ನು ಹೊಂದಿರುವ ಮತ್ತು ಯಥಾರ್ಥವಾಗಿ ಅವನ ಸೇವೆಯನ್ನು ಮಾಡುವವಳು. ಈ ಅರ್ಥಗಳು ಹೆಣ್ಣಿಗೆ ಅರ್ಥಗಳನ್ನು ನೀಡುತ್ತಲೇ, ಶೋಷಣೆಯ ಸಂಪ್ರದಾಯವನ್ನು ಪದಕೋಶದಂತೆ

ನಿರ್ದಿಷ್ಟಗೊಳಿಸುವ ಕ್ರಮವು ತಪ್ಪಾಗಿದೆ. ಇದನ್ನು ಓದಿಕೊಳ್ಳುವ ಸಾಧ್ಯವಾಗುವ ಕಡೆಯಲ್ಲಿ ಬದಲಿಸುವ ಕಾರ್ಯವನ್ನು ನಿರ್ವಹಿಸಬೇಕಿದೆ. ಗೃಹಿಣಿ ಎಂದರೆ ಗೃಹದ ಎಲ್ಲವನ್ನೂ ಬಲ್ಲವಳು, ಗೃಹವನ್ನು ಪುರುಷನೊಟ್ಟಿಗೆ ಸರಿಯಾಗಿ ನಿರ್ವಹಿಸುವವಳು ಎಂಬ ಅರ್ಥಗಳನ್ನು ತಿಳಿಯಬಹುದು. ಆದರೆ ಪತಿವ್ರತೆ ಎಂಬ ಪದವು ಎಷ್ಟೆಲ್ಲಾ ತಪ್ಪು ಅರ್ಥಗಳನ್ನು ನೀಡುತ್ತದೆ ಗಮನಿಸಿ. 'ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ, ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷ ಬೆರೆದಂತೆ ಕಾಣಾ! ರಾಮನಾಥ.' ಎಂಬ ಜೇಡರ ದಾಸಿಮಯ್ಯನವರ ವಚನದಲ್ಲಿ ಒಂದಾದ ಭಕ್ತಿಯ ಶ್ರೇಷ್ಟತೆಯನ್ನು ಹೇಳುತ್ತಲೇ, ಸಮಾನತೆಯ ಸಾರವನ್ನು ಪುರುಷನಿಗೆ ನೇರವಾಗಿ ನಿರ್ವಚಿಸುತ್ತಾರೆ. ಅಮೃತದೊಳು ವಿಷ ಬೆರೆಸಬಾರದು ಅದು ಕೆಟ್ಟದೆಂದು ತಿಳಿಸಿದ್ದಾರೆ. ಪತಿಗೆ ಸತಿಯು ವ್ರತದಂತೆ ಅವನ ಸೇವೆ ಮಾಡಬೇಕೆಂಬುದೇ ಶೋಷಣೆಯ ಅರ್ಥಗಳನ್ನು ಧ್ವನಿಸುತ್ತದೆ. ಜನಪದ ಹಾಡುಗಳ ಮೂಲಕ, ಅದರಲ್ಲೂ ಹೆಣ್ಣಿನ ಮೂಲಕವೇ ವಿಚಾರವೆಂಬಂತೆ ತಲುಪಿಸಿದ ಪುರುಷಾಧಿಕಾರಗಳು ಹಾಗೂ ಭಕ್ತಿಯಂತೆ ಮೌಢ್ಯಗಳನ್ನು ಪಾಲಿಸುತ್ತಾ ಬರುತ್ತಿರುವ 21 ಶತಮಾನಗಳ ಹೆಣ್ಣಿನ ಅಭಿವ್ಯಕ್ತಿಗಳಿಗೆ ಇಂದಿಗೂ ಬೆಳಕಿಲ್ಲ. ವಿಕಿಪೀಡಿಯದಲ್ಲಿ ಗರತಿ ಪದವನ್ನು ವಿವಾಹವದವಳು ಎಂಬ ಅರ್ಥವನ್ನು ನೀಡುತ್ತಲೇ ಗಂಡ, ಮಕ್ಕಳು, ಅತ್ತೆ, ಮಾವ ಇನ್ನಿತರ ಸಂಬಂಧಗಳನ್ನು ನಿರ್ವಹಿಸುವ ಪದವಿಯಾಗಿ ಸೂಚಿಸಿರುವಲ್ಲಿ ತಪ್ಪಿದೆ. ಇದನ್ನು ಸರಿಪಡಿಸುವ ಹೊಣೆಗಾರಿಕೆಯೂ ನಮ್ಮದೇ ಆಗಿದೆ. ಎಲ್ಲರೊಂದಿಗೆ ಕೌಟುಂಬಿಕ ಪ್ರೀತಿ ಹೊಂದುವವಳು ಎಂಬಂತೆ ಬದಲಿಸಬೇಕಿದೆ. ಕುಟುಂಬವೆಂದರೆ ರಕ್ತಸಂಬಂಧದಂತೆ ಬೆಸೆದುಕೊಂಡ ಪ್ರೇಮದ ಪರಿಧಿ. ಅಲ್ಲಿ ಪರಸ್ಪರ ಪ್ರೀತಿ ಇರಬೇಕು. ಹೆಣ್ಣು ಕುಟುಂಬದವರನ್ನು ಪ್ರೀತಿಯ ಮೂಲಕ ಸರಿಪಡಿಸುವ ಜ್ಞಾನವಂತೆ ಎಂಬುದರಲ್ಲಿಯೂ ತಪ್ಪಿಲ್ಲ. ಇಂತಹ ಅರ್ಥಗಳನ್ನು ಶಬ್ದಕೋಶದಲ್ಲಿ ಉಳಿಸಿಕೊಳ್ಳುತ್ತಲೇ, ನಾವು ಸುದೀರ್ಘವಾದ ಮಹಿಳಾ ಚಿಂತನೆಗಳನ್ನು ನಿರ್ವಹಿಸುತ್ತಾ ಸಾಗಿದಷ್ಟೂ ವ್ಯರ್ಥವಾಗುತ್ತದೆ. ಈ ಕುರಿತು ನಮ್ಮ ಜನಪದ ಸಾಹಿತ್ಯದ ಹಾಡುಗಳಲ್ಲಿ ಮೊದಲಿಗೆ ಉಲ್ಲೇಖವಾದ ಗರತಿಯ ಗುಣಲಕ್ಷಣಗಳ ಕುರಿತು ಆಧುನಿಕ ಓದುವನ್ನು ಇಲ್ಲಿ ಗಮನಿಸಬೇಕಾಗಿದೆ.

'ಗರತಿಯ ಹಾಡು' ಎಂಬ ಕೃತಿಯು 1931ರಲ್ಲಿ ಪ್ರಕಟವಾದ ಕನ್ನಡದ ಮೊದಲ ಜನಪದ ಹಾಡುಗಳ ಸಂಗ್ರಹ. ಈ ಹಾಡುಗಳಲ್ಲಿ ಹೆಣ್ಣಿನ ಮಹತ್ವವನ್ನು ತಿಳಿಸುತ್ತಲೇ ಕರ್ತವ್ಯಗಳನ್ನು ಅನುವುಗೊಳಿಸುತ್ತಾ, ಅಂದಿನ ಹೆಣ್ಣಿನ ಶೋಷಣೆಯ ಅಭಿಮುಖಗಳನ್ನು ಕಟ್ಟಿಕೊಡುತ್ತದೆ. ಹೆಣ್ಣಿನ ಹಲವು ಕಾರ್ಯಗಳನ್ನು ಕರ್ತವ್ಯಗಳಂತೆ ನೋಡುವ ಪರಿಧಿ ಬದಲಾಗಬೇಕಿದೆ. ಆ ದೃಷ್ಟಿಯಲ್ಲಿ ಇಲ್ಲಿನ ಹಾಡುಗಳ ಕೆಲವು ಪರಿಶೀಲನೆಗಳನ್ನು ಇಲ್ಲಿ ನೀಡುತ್ತೇನೆ.

"ಜೀವನವೇ ದೇವತೆಯಾದ, ತ್ರಿಪದಿ ಛಂದದಲ್ಲಿ ಹೊರಹೊಮ್ಮಿದ 'ಗರತಿಯ ಹಾಡಿ'ನ ಋಷಿಗಳು : ಹೆಣ್ಣುಮಕ್ಕಳು – ನಮ್ಮ ತಾಯಿ – ತಂಗಿಯರು, ಅಮ್ಮ – ಅಕ್ಕಂದಿರು, ಮಡದಿ–ಮಕ್ಕಳು. ಹಾಗೆ ವಿಚಾರಿಸಿ ನೋಡಿದರೆ ಅವರದೇ ನಿಜವಾದ ಕಾವ್ಯ . ಉಳಿದುದು ಕಾವ್ಯದ ಛಾಯೆ, ಕಾವ್ಯವು ಕಾಂತಾಸಮ್ಮಿತಿಯೆಂದು ಹೇಳುವರಷ್ಟೆ, ಕಾಂತೆಯರ ಮಾತಿನಂತಿರುವುದೆ ಕಾವ್ಯವಾದರೆ, ಕಾಂತೆಯರ ಮಾತೇ ಕಾವ್ಯದ ಮಾತೆಯಲ್ಲವೆ? ನಾವು ಕಾವ್ಯ ಕಾವ್ಯ ಎಂದು ಕರೆಯುವುದು ಅದರದೊಂದು ಸಂತಾನ, ಕಾಂತೆಯರ ಮಾತೇ ಕಾವ್ಯಮಾತೆ ; ವೇದಕ್ಕೆ ಮಣಿಯದವರು, ಶಾಸ್ತ್ರಕ್ಕೆ ಬಗ್ಗದವರು, ಕಾಂತೆಯರ ಮಾತಿಗೆ ಮೆತ್ತಗೆ ಹಣ್ಣಾಗುವುದನ್ನು ಕಂಡು, ವೇದಶಾಸ್ತ್ರದ ತಿರುಳು –ಕಾವ್ಯಮೋಹಿನಿಯ ಅವತಾರವನ್ನು ತಳೆದಿತು, ಇಲ್ಲಿ 'ಕಾಂತೆ'ಯೆಂಬ ಮಾತನ್ನು 'ಹೆಂಡತಿ' ಎಂಬ ಸಂಕುಚಿತಾರ್ಥದಲ್ಲಿ ತಿಳಿದುಕೊಳ್ಳದೆ

ಜಾತಿ ಸಾಮಾನ್ಯವೆಂದೇ ತಿಳಿಯಬೇಕು." ಎಂದು ಬೇಂದ್ರೆಯವರು ಗರತಿಯ ಹಾಡು ಕೃತಿಗೆ ಪರಿಚಯವನ್ನು ಬರೆಯುತ್ತಾ ಹೀಗೆ ನುಡಿದಿದ್ದಾರೆ. ಕಾವ್ಯವು ಹೆಣ್ಣಿನ ಶ್ರುತಿ ಎಂದಿದ್ದಾರೆ. ಹೆಣ್ಣು ಬರಿ ಸಂಸಾರದ ಕಣ್ಣಾಗಿಯೇ ಉಳಿಯದೇ, ವಿಶ್ವದ ಕಣ್ಣು ತೆರೆಸುವ ಸಾಹಿತ್ಯದ ಶ್ರುತಿಯಾಗಿಸುವ ಕವಿಯ ಪರಿ ವಿಶೇಷವಾದುದು. ಈ ಚಿಂತನೆಗೆ ಜನಪದ ಹಾಡುಗಳೇ ಕಾರಣ. ಗರತಿಯ ಹಾಡಿನಲ್ಲಿರುವ ಹೆಣ್ಣಿನ ಮಹತ್ವವನ್ನು ಇಲ್ಲಿ ವಿಶೇಷವಾಗಿ ಬಣ್ಣಿಸಿದ್ದಾರೆ.

ಹೆಣ್ಣಾಗಿ ಹುಟ್ಟೋಕ್ಕಿಂತ ಮಣ್ಣಾಗಿ ಹುಟ್ಟದರೆ

ಮಣ್ಣಿನ್ಮೇಲೊಂದು ಮರವಾಗಿ ಹುಟ್ಟದರೆ

ಪುಣ್ಯವಂತರಿಗೆ ನೆರಳಾಗಿ

ಹೆಣ್ಣಿನ ನೋವು ಇಂದು, ನೆನ್ನೆಯದಲ್ಲ. ಆದರೆ ಹೆಣ್ಣು ಗರತಿಯಾಗಿ ಪುಣ್ಯದ ಕೆಲಸಗಳನ್ನು ಮಾಡುತ್ತಾ ಬಂದರೂ, ಹೆಣ್ಣಿಗೆ ಹಿಂಸೆಯು ಹೆಜ್ಜೆ ಹೆಜ್ಜೆಗೂ ಈ ಸಮಾಜ ನೀಡುತ್ತಾ ಬಂದಿದೆ. ಹೆಣ್ಣು ಕುಟುಂಬದ ಕಣ್ಣು ಎಂಬುದಾಗಿ ಎಚ್ಚರಿಸುತ್ತಲೇ, ಕುಟುಂಬದ ಎಲ್ಲಾ ಜವಾಬ್ದಾರಿಯನ್ನು ಹೆಣ್ಣಿನ ಮೇಲೆಯೇ ಹೊರಿಸುತ್ತಾ, ಪುರುಷನು ಹೊರ ಸಮಾಜದಲ್ಲಿ ಉಳಿಯುವ ಚಿಂತನೆಮಾಡಿದನು.

ನಾವು ಇದಕ್ಕೆ ಸೂಕ್ತವಾಗಿ ಗರತಿಯ ಹಾಡು ಎಂಬ ಕೃತಿಯ ಕೆಲವು ವಿವರಗಳನ್ನೇ ಇಲ್ಲಿ ಸೂಚಿಸಬಯಸುತ್ತೇನೆ. ಏಕೆಂದರೆ ಇದರ ವಿವರಗಳು ನಮ್ಮ ಸಾಹಿತ್ಯ ಸಂಸ್ಕೃತಿ ಚಿಂತಕರು ನೀಡಿದ ವಿವರಗಳಾದ ಕಾರಣ ಅವುಗಳ ಒಳ ಅಂಶಗಳೇ ಹಲವು ದಿಕ್ಸೂಚಿಗಳನ್ನು ಸೂಚಿಸುತ್ತವೆ.

'ಗರತಿಯ ಹಾಡು' ನಮ್ಮ ಸ್ತ್ರೀ ಜೀವನದ ಒಳಗನ್ನಡಿ, ಅದು ನಮ್ಮ ಹೆಣ್ಣುಮಕ್ಕಳ ಹೃದಯದ ಪಡಿಗನ್ನಡಿ, ಅದರಲ್ಲಿ ಮಮತೆಯ ಮಾಧುರ್ಯವು ಮೈವೆತ್ತಿದೆ. ಪ್ರೇಮದ ಸತ್ವವು ಅಳವಟ್ಟಿದೆ. ಅದರಲ್ಲಿ ಹೆಣ್ಣಿನ ತ್ಯಾಗ ಬುದ್ಧಿಯು ತುಳುಕುತ್ತಿದೆ. ಕೌಟುಂಬಿಕ ಬಾಳಿನ ರಸವು ಪರಿಪಾಕಗೊಂಡಿದೆ. ಅದು ಜೀವನದ ಜೀವಾಳವಾಗಿದೆ. ಸುಖದ ಸೆಲೆಯಾಗಿದೆ. ಅದು ನಮ್ಮಿಂದ ದೂರವಾದಂತೆ ಬಾಳು ಕಿಚ್ಚಿನ ಕುಂಡವಾಗುತ್ತದೆ. ಯಾಕೆಂದರೆ "ಜಗತ್ತಿನೊಳಗಿನ ದುಃಖವು ನಾಶವಾಗಬೇಕೆಂದೂ, ಮನುಷ್ಯನು ಸುಖಿಯಾಗಬೇಕೆಂದೂ ನಿಮಗನಿಸುತ್ತಿದ್ದರೆ, ನಿಮ್ಮ ಕೌಟುಂಬಿಕ ಸಂಬಂಧವನ್ನು ಚೆನ್ನಾಗಿ ಸರಿಪಡಿಸಿಕೊಳ್ಳತಕ್ಕದ್ದು, ತ್ಯಾಗವೇ ಅದಕ್ಕೆ ಏಕಮಾತ್ರವಾದ ಉಪಾಯ, ತ್ಯಾಗವೆಂದರೆ ಅರಣ್ಯವಾಸವಲ್ಲ. ಸಮಾಜದಿಂದ ದೂರವಿರುವುದಲ್ಲ. ಭಾರತೀಯರು ತ್ಯಾಗವನ್ನು ಮನೆಯಲ್ಲಿಯೇ ಆಚರಿಸಬೇಕಾಗಿದೆ. ತ್ಯಾಗವೆಂಬ ತತ್ತ್ವಜ್ಞಾನವು ಅರಣ್ಯವಾಸಿಗಳಿಗೆ ಮಾತ್ರ ಕಟ್ಟಿಟ್ಟಿದ್ದರೆ, ಅದರಪ್ರಯೋಜನ ನಮಗೇನು? ನೀವು ಎಲ್ಲಿದ್ದರೂ ಹೇಗಿದ್ದರೂ ತ್ಯಾಗವು ನಿಮ್ಮನ್ನು ಉಚ್ಚಸ್ಥಿತಿಯಲ್ಲಿ ಇರಿಸುತ್ತದೆ. ನಿಮ್ಮ ಶಕ್ತಿಯನ್ನು ಬೆಳೆಸುತ್ತದೆ : ನಿಮ್ಮನ್ನು ಈಶ್ವರರನ್ನಾಗಿ ಮಾಡಿಬಿಡುತ್ತದೆ . ನಿಮ್ಮ ಎಲ್ಲ ದುಃಖ –ಚಿಂತೆಗಳನ್ನು ನಿವಾರಿಸಿ, ನಿಮ್ಮಲ್ಲಿ ಸುಖವನ್ನೂ, ನಿರ್ಭಯವನ್ನೂ ತಂದು ತುಂಬುತ್ತದೆ." (ಅರಿಕೆ –ಸಿಂಪಿ ಲಿಂಗಣ್ಣ) ಈ ವಿಚಾರಗಳು 20ನೇ ಶತಮಾನದ ಹೆಣ್ಣಿನ ಸ್ಥಿತಿಯನ್ನು ಕುರಿತು ನಿರ್ವಚಿಸುತ್ತಲೇ, ಆಕೆಯ ಶ್ರೇಷ್ಟತೆಯನ್ನು ತಿಳಿಸುತ್ತದೆ. ಇದರಲ್ಲಿ ಭಾರತೀಯ ಪರಂಪರೆಯ ಸದ್ಗುಣಗಳನ್ನು ಇಲ್ಲಿ ಚರ್ಚಿಸಲಾಗಿದೆ. ಆ ತ್ಯಾಗವು ಪುರುಷನ ಕರ್ತವ್ಯವೂ ಹೌದು

ಎಂಬುದನ್ನು ನಾವು ಶಿಕ್ಷಣದ ಮೂಲಕ ಇಂದು ಸಮಾನತೆಯ ಸದ್ಗುಣಗಳನ್ನು ಬೆಳೆಸಬೇಕಾಗಿದೆ. ಇಂತಹ ಹೆಣ್ಣಿನ ಕರ್ತವ್ಯಗಳು ಆಕೆಯನ್ನು ಶೋಷಣೆಗೂ ತಳ್ಳಿವೆ ಎಂಬುದನ್ನು ಕೃತಿಯ ಕೆಲವು ಹಾಡುಗಳನ್ನು ಚರ್ಚಿಸಿವೆ.

ಗರತಿಯ ಹಾಡು ಕೃತಿಯಲ್ಲಿ ತವರು ಮನೆ – ತಾಯ್ತಂದೆಯ ಭಾಗದಲ್ಲಿ ಹೆಣ್ಣಿನ ಸಂಸಾರದ ಕರ್ತವ್ಯಗಳನ್ನು ಹೇಳುತ್ತಲೇ ಹೆಣ್ಣನ್ನು ಕುಟುಂಬದ ಜವಾಬ್ದಾರಿಗೆ ತಳ್ಳುತ್ತಾ, ಎಲ್ಲಾ ಹಿಂಸೆಗಳನ್ನು ಸಹಿಸುವ ಶಿಕ್ಷೆಯನ್ನು ನೀಡುವ ಹಾಡುಗಳನ್ನು ಜನಪ್ರಿಯಗೊಳಿಸುತ್ತಲೇ ಬಂದಿದ್ದೇವೆ.

ತಾವರೆಯ ಗಿಡವು ದೇವರಿಗೆ ನೆರಳಾಗುವಂತೆ, ಹೆಣ್ಣು ನೀ ಕೊಟ್ಟ ಮನೆಗೆ ಹೆಸರಾದೆ ಎನ್ನುವಾಗ ಹೆಣ್ಣಿನ ಶ್ರೇಷ್ಠತೆಯನ್ನು ತಿಳಿಸುತ್ತಲೇ, ಕರ್ತವ್ಯವನ್ನು ಸದಾ ಎಚ್ಚರಿಸುತ್ತಾರೆ. ಕೊಟ್ಟ ಮನೆಗೆ ಹೆಸರನ್ನು ತರುವ ಕಾರಣಕ್ಕೆ ಹೆಣ್ಣು ಎಲ್ಲರ ಹಿಂಸೆಯನ್ನು ಸಹಿಸುತ್ತಾ ಸಾಗುವ ಪ್ರಕ್ರಿಯೆಗೆ ಯಾವುದೇ ಉತ್ತರಗಳನ್ನು ಜನಪದರು ನೀಡಲಿಲ್ಲ. ನೀಡಿದ್ದರೂ, ಜನಪದರು ಅದನ್ನು ಉಳಿಸಿಕೊಂಡು ಬರಲಿಲ್ಲ ಅನಿಸುತ್ತದೆ.

ಹೆಣ್ಣು ಹಡೆಯಲಿ ಬ್ಯಾಡ ಹೆರವರಿಗೆ ಕೊಡಬ್ಯಾಡ।

ಹೆಣ್ಣು ಹೋಗಾಗ ಅಳಬ್ಯಾಡ। ಹಡದವ್ವ।

ಸಿಟ್ಟಾಗ ಶಿವಗ ಬೈಬ್ಯಾಡ॥

ಹೆಣ್ಣು ಮಕ್ಕಳ ದುಃಖ ಹೆತ್ತವ್ವ ಬಲ್ಲಾಳು ಎನ್ನುತ್ತಲೇ ಹೆಣ್ಣಿನ ಕಷ್ಟವನ್ನು ಹೇಳದೆ ಉಳಿಸಲಾಯಿತು. ಹೆಣ್ಣಿನ ಹಿಂಸೆಯನ್ನು ಕಂಡ ಹೆಣ್ಣಿನ ಜೀವವು ಈ ರೀತಿಯಲ್ಲಿ ಬೇಡುವ ತ್ರಿಪದಿಯು ವಿಶೇಷವಾಗಿದೆ. ಹೆಣ್ಣನ್ನು ಹಡೆಯಲು ಬೇಡವೆಂದು ಕೇಳುವ ಪರಿಯು ಈ ಕಾಲದಲ್ಲಿಯೂ ನಿಂತಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಹೆಣ್ಣು ಇಂದು ಹಲವು ಕ್ಷೇತ್ರಗಳನ್ನು ಪ್ರವೇಶಿಸಿ, ಹೆಣ್ಣು ಪುರುಷನ ಸಮಾನವಾದ ಶಕ್ತಿಯುಳ್ಳವಳು ಮತ್ತು ಆಕೆಯ ಜನನವು ಶ್ರೇಷ್ಠವಾದದು ಎಂಬ ಮನೋಭೂಮಿಕೆಯ ಶ್ರೇಷ್ಠತೆಯನ್ನು ಸೃಷ್ಟಿಮಾಡಿರುವುದು ಹೆಣ್ಣಿನ ಶಿಕ್ಷಣ. ಹೆಣ್ಣನ್ನು ಕೆಟ್ಟವರಿಗೆ ಕೊಡಬಾರದು ಎನ್ನುವಾಗ, ಕೊಟ್ಟಮೇಲೆ ದುಃಖಿಸಬಾರದು ಎನ್ನುವಾಗ ಹೆಣ್ಣಿನ ಶ್ರೇಷ್ಠತೆಯನ್ನು ವ್ಯರ್ಥಮಾಡುವ ಯಾವ ಶಕ್ತಿಗಳಿಗೂ ನೀಡಬಾರದೆಂಬ ಎಚ್ಚರವನ್ನೂ ಇಲ್ಲಿ ತಿಳಿಸಿದ್ದಾರೆ. ನಾವು ಹೆಣ್ಣನ್ನು ಗೌರವಿಸಬೇಕಾದ ಕರ್ತವ್ಯವು ಆಕೆಯ ಶ್ರೇಷ್ಠತೆಯನ್ನು ತಿಳಿಸುತ್ತದೆ. ಹೆಣ್ಣು ಸಂಸಾರವೆಂಬ ಒಂದು ಶ್ರೇಷ್ಠ ಹೊಳೆಯನ್ನೇ ಸೃಷ್ಟಿಸಿ, ಅದರಲ್ಲಿ ಹಲವು ತೊರೆಗಳ ಸಂಬಂಧವನ್ನು ಬೆರಸಿ, ಶಾಂತವಾಗಿ ಹರಿಯುವಂತೆ ಮಾಡಿದವಳು. ಆದರೆ ಈ ಹೊಳೆಯು ಹರಿಯುತ್ತಲೇ ಹುಕ್ಕುವುದೂ ಹೌದು, ಭಿನ್ನವಾಗಿ ಹರಿಯುವುದೂ ಹೌದು. ಇದರ ಚಿಂತನೆಯನ್ನು ಗರತಿಯ ಹಾಡು ಕೃತಿಯ ಹರಿಕೆಯಲ್ಲಿ ಸಿಂಪಿ ಲಿಂಗಣ್ಣ ಅವರು ಅರ್ಥಪೂರ್ಣವಾಗಿ ಚರ್ಚಿಸಿದ್ದಾರೆ.*

ಗರತಿಯಾದ ಹೆಣ್ಣು ಎಂದರೇನು? ಎಂಬ ಪ್ರಶ್ನೆಯು ನಮ್ಮನ್ನು ಕಾಡಬಹುದು. ಈಗಾಗಲೇ ನಾವು ಕಂಡಂತಹ ಗುಣಗಳ ಸರ್ವವಿಧಿತವೇ ಹೆಣ್ಣನ್ನು ಗರತಿಯನ್ನಾಗಿಸುತ್ತದೆ. ಕೇವಲ ಗಂಡಿನ ಸೇವೆಯನ್ನು ಮಾಡುವವಳು ಸೇವಕಿಯಾಗುತ್ತಾಳೆಯೇ ಹೊರೆತು ಹೆಣ್ಣಾಗುವುದಿಲ್ಲ. ಹೆಣ್ಣು ಬರೀ ಸೇವಕಿಯಲ್ಲ. ಹೆಣ್ಣು ಸೃಷ್ಟಿಸುವವಳು, ಮಾರ್ಗದರ್ಶಿ, ರೂಪಿಣಿ. ಇಂತಹ ಹೆಣ್ಣಿಗೆ ಪುರುಷನು ಅಣ್ಣ, ತಮ್ಮ, ತಂದೆ ಮೊದಲಾದ

ಸ್ಥಾನದಲ್ಲಿ ಸದಾ ಬೆಂಬಲಿಸುತ್ತಾ, ತಾವೂ ಒಂದು ಮೆಟ್ಟಿಲಾಗಿ ಆಕೆಯ ದರ್ಶನವನ್ನು, ಕರ್ತವ್ಯದ ಫಲಗಳನ್ನು ಪಡೆಯುತ್ತಾ ಸಾಗಬೇಕು. ಹೆಣ್ಣು ಈ ಸಂಬಂಧಗಳಿಗಾಗಿ ಅದೆಷ್ಟು ಹಂಬಲಿಸರಬಹುದೆಂದು ನಮ್ಮ ಜನಪದ ಹಾಡಗಳನ್ನು ಗಮನಿಸಿದರೆ ತಿಳಿಯುತ್ತದೆ. ಆದರೆ ಹೆಣ್ಣಿಗಾಗಿ ಹಂಬಲಿಸಿದ ಪುರುಷನ ದುಃಖಗಳು ನಮ್ಮಲ್ಲಿ ಕಂಡುಬರುವುದು ಬಹಳ ಕಡಿಮೆ. ಗರತಿಯೆಂಬ ಪದವು ಸದ್ಗುಣ ಶೀಲ ಹೆಣ್ಣನ್ನು ಸೃಷ್ಟಿಸುವ ಪದವೇ ಆಗಿದೆ.

"ಒಬ್ಬ ಆದಿಮಾಯೆಯೇ ತಾಯಿ, ತಂಗಿ, ಅಕ್ಕ ಹೆಂಡತಿ, ಮಗಳಾಗಿ ಜೀವವನ್ನು ಆಡಿಸಲು ನಿಂತಂತೆ ಭಾಸವಾಗಿ ಬಿಡುವುದು, ಆ ಹೃದಯ, ಆ ದುಃಖಸಹಿಷ್ಣುತೆ, 'ವಜ್ರಕುಸುಮ' ಅಸಾಧಾರಣೋಕ್ತಿ, ಧ್ವನಿ ಪ್ರಾಣವಾದ ಸ್ವಭಾವಸರಲ, ವಸ್ತುಸಹಜ ನಿವೇದನಪದ್ಧತಿ – ಒಂದೆರಡೇ – ಇವೆಲ್ಲ ಹೆಣ್ಣಿಗೆ ಹುಟ್ಟುಗುಣವಾಗಿವೆ . ಆದ ಕಾರಣ ವೇದಗಳು ದೇವನಿಃಶ್ವಸಿತಗಳಾದಂತೆ, ಸ್ತ್ರೀ ಹೃದಯದ ನಿಃಶ್ವಸಿತವೇ ಕಾವ್ಯವೆಂದು ಹೇಳಬಹುದು. ಸರಸ್ವತಿಯಿಲ್ಲದ ಸ್ವಾರಸ್ಯವುಂಟೇ?" ಎಂಬ ಬೇಂದ್ರೆಯವರ ನುಡಿಗಳು ಅರ್ಥಪೂರ್ಣ.

ಹೆಣ್ಣನ್ನು ಗರತಿಯಾಗಿ ಕಾಣುವಾಗ ಲಿಂಗಭೇದವಿಲ್ಲದೆ ಆಕೆಯ ಶಕ್ತಿಯನ್ನು ಅರಿಯಬೇಕಿದೆ. ಆಕೆಯನ್ನು ಕರ್ತವ್ಯಕ್ಕೆ ಸಿದ್ಧಮಾಡುವ ಮೊದಲು ಅದು ನಮ್ಮೆಲ್ಲರ ಪೋಷಣೆಯಾಗುವಂತೆ ನಾವು ಅದನ್ನು ರೂಪಿಸಬೇಕಿದೆ. ಹೆಣ್ಣು ಸೃಷ್ಟಿಯ ಕಣ್ಣು. ಆದರೆ ಅದುವೇ ಆಕೆಯ ಶೋಷಣೆಯ ನೆಲೆಯಾಗಬಾರದು. ಪುರುಷನ ಎಲ್ಲಾ ಸ್ಥಾನಗಳೂ ಹೆಣ್ಣಿನ ಸಾಧ್ಯತೆಗಳೇ ಆಗಿವೆ. ಗರತಿ ಎಂಬುದು ಪತಿವ್ರತೆ ಎಂಬ ಕರ್ತವ್ಯ ಪದಗಳನ್ನು ಅಳಿಸಿ, ಸಂಸಾರದ ಸಾರ ಅವಳು. ಎಂಬುದಾಗಿ ಈ ಸಂಶೋಧನೆಯ ಮೂಲಕ ಅರಿಯಬೇಕಿದೆ. ವಿಕಿಪೀಡಿಯದಲ್ಲಿ ಗರತಿ ಎಂದರೆ ವಿವಾಹವಾದವಳು, ವಿವಾಹದ ನಂತರ ಹೆಣ್ಣು ತನ್ನ ಗಂಡ, ಮಕ್ಕಳು, ಅತ್ತೆ, ಮಾವ ಇನ್ನಿತರ ಸಂಬಂಧಗಳನ್ನು ನಿರ್ವಹಿಸುವುದೇ ಗರತಿಯ ಧರ್ಮ ಅಥವಾ ಪತಿವ್ರತೆಯ ಧರ್ಮ ಎನ್ನಲಾಗಿದೆ. ಇದನ್ನು ನಾನೊಬ್ಬ ವಿಕಿಪೀಡಿಯಾ ಸದಸ್ಯನಾಗಿ, ಗರತಿ ಎಂದರೆ ವಿವಾಹವಾದವಳು, ವಿವಾಹದ ಜೊತೆಗೆ ಹೆಣ್ಣು ತನ್ನ ಗಂಡ, ಮಕ್ಕಳು, ಅತ್ತೆ, ಮಾವ, ಸ್ನೇಹ ಇನ್ನಿತರ ಸಂಬಂಧಗಳಿಗೆ ಪ್ರೇಮವನ್ನು ತುಂಬಿ, ಸದ್ಗುಣಗಳ ಮೂಲಕ ಸಾಗುವ ಮಾರ್ಗ ರೂಪಿಸುವವಳು ಎಂಬುದಾಗಿ ಬದಲಿಸುತ್ತಿದ್ದೇನೆ. ಇನ್ನಾದರೂ ನಾವು ಹೊಸ ಅರ್ಥಗಳನ್ನು ನಿರ್ವಚಿಸಿಕೊಂಡು ಓದಿಕೊಳ್ಳಬೇಕಿದೆ. ಜ್ಞಾನದ ಪ್ರಸರಣದಲ್ಲಿ, ವಿಚಾರ ಸಂಕಿರಣಗಳ ಸಮ್ಮೇಳನದಲ್ಲಿ ಲೋಕಕ್ಕೆ ಸರಿಯಾದ ಅರ್ಥಗಳನ್ನು ನೀಡಬೇಕಿದೆ.

ನಮ್ಮ ಜನಪದರಲ್ಲಿ ಗರತಿಗೆ ಒಂದು ಬಾಳ ಸಂಹಿತೆಯನ್ನು ರಚಿಸಲಾಗಿದೆ. ಆ ಬಾಳ ಸಂಹಿತೆಯಲ್ಲೂ ಹೆಣ್ಣಿನ ಮಹತ್ವವನ್ನು ಈ ಸಮಾಜಕ್ಕೆ ಪರಿಚಯಿಸುವ ಕಾರ್ಯವೂ ನಡೆದಿದೆ. ಆದರೆ ಸಂಹಿತೆಯ ಪಾಲನೆಯಲ್ಲಿ ಹೆಣ್ಣು ಶೋಷಣೆಯ ಪ್ರಧಾನ ಪಾತ್ರವೇ ಆದುದನ್ನು ಗಮನಿಸಬಹುದು. 'ಗರತಿಯ ಬಾಳಸಂಹಿತೆ' ಎಂಬ ಅರ್ಥಪೂರ್ಣ ಕೃತಿಯೊಂದು 1985ರಲ್ಲಿ ಶ್ರೀ ಅರವಿಂದ ಗ್ರಂಥಾಲಯದಿಂದ ಪ್ರಕಟಗೊಂಡಿತು. ಬೇಂದ್ರೆ ಅವರು 'ಗರತಿಯ ಹಾಡು' ಕೃತಿಯಲ್ಲಿ ಗುರ್ತಿಸಿದ ಹೆಣ್ಣಿನ ನಾಲ್ಕು ಅವತಾರಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಮಗಳು, ಸೊಸೆ, ಹೆಂಡತಿ, ತಾಯಿ ಇವು ನಾಲ್ಕು ಜನ್ಮಗಳು, ಸ್ಥಾನಗಳನ್ನು ಹೆಣ್ಣಿಗೆ ನೀಡುತ್ತಲೇ ಚರ್ಚಿಸಬೇಕಾದ ಹಲವು ವೈಚಾರಿಕ ಅಂಶಗಳು ಇಲ್ಲಿವೆ. ಕಾಲಧರ್ಮದಂತೆ ಕೆಲವು ವಿಚಾರಗಳನ್ನು ಚರ್ಚಿಸದಿರಬಹುದು. ಓದುವಿಗೆ ಅಪ್ಪಿಕೊಂಡ ನಾವು ಮುಂದುವರೆಸಬೇಕಿದೆ.

ಗರತಿಯ ಬಾಳಸಂಹಿತೆಯು ಇಪ್ಪತ್ತು ಅಂಶಗಳ ವಿಚಾರ ಕೋಶ. ಮ.ನಿ. ತೋಳನೂರ ಅವರು ಇವುಗಳನ್ನು ಜಾನಪದ ತಲೆಕಟ್ಟುಗಳು ಹಾಗೂ ಹೊಸ ವಿಚಾರಗಳು ಎಂದಿದ್ದಾರೆ. ಇವು ಗರತಿಯ ಮಹತ್ವವನ್ನು ತಿಳಿಸುತ್ತಲೇ ಪುರುಷ ಸಮಾನವಾದ ಸ್ಥಾನ, ಪೌರುಷದ ಹಂಚಿಕೆ, ಪುರುಷ ಸಂಹಿತೆಯ ಸಹಜತೆಗಳನ್ನು ವಿವರಿಸಿದ್ದಾರೆ.

**ಧರ್ಮವೊಂದು ಪುರುಷಾರ್ಥ :** ಧರ್ಮ ಚಿಂತನೆಯ ನಾಲ್ಕು ಪುರುಷಾರ್ಥಗಳನ್ನು ಸಮರ್ಪಕವಾಗಿ ಸಾಧಿಸಿದವಳು ಹೆಣ್ಣು. ಈ ಕಾರಣದಿಂದ ಹೆಣ್ಣನ್ನು ಗರತಿ ಎನ್ನಲಾಗಿದೆ. ಅಕ್ಕ ಮಹಾದೇವಿ, ಅಲ್ಲಮ, ಶ್ರೀರಾಮಕೃಷ್ಣ ಪರಮಹಂಸ, ಗಾಂಧೀಜೀ, ಅರವಿಂದೋ ಇವರೆಲ್ಲಾ ದೈವತ್ವಕ್ಕೆ ಹೆಣ್ಣನ್ನು ಹೋಲಿಸಿ, ನೋಡಿದ್ದಾರೆ. ಬರಿ ನುಡಿ, ಬರೆಹವಾಗದೆ, ಬದುಕಿ ತೋರಿದ್ದಾರೆ. ಗರತಿಯು 'ಅರಿತು ಜೀವ ತುಂಬಿ ಒಂದಾಗುವ ಧರ್ಮ'ವನ್ನು ನಿರ್ವಹಿಸಲು ಬಂದು ಮಾರ್ಗದರ್ಶಿಯೂ, ಮಾದರಿಯೂ ಆಗಿದ್ದಾಳೆ. ಆದ್ದರಿಂದ ಧರ್ಮದ ಹೊಸ ವ್ಯಾಖ್ಯಾನವನ್ನು ಇಲ್ಲಿ ಸ್ಪಷ್ಟಮಾಡಿಕೊಳ್ಳಬಹುದು.

**ಚತುರವತಾರ :** ಗರತಿಯ ಬಾಳು ನಾಲ್ಕು ಅವತಾರಗಳಲ್ಲಿ ಸಾರ್ಥಕಗೊಂಡಿದೆ. ಆದರೆ ಪುರುಷನ ಸಂಪೂರ್ಣ ಗೈರು ಹಾಜರಿಯನ್ನು ಗಮನಿಸಿದರೆ, ಹೆಣ್ಣಿನ ತಾಳ್ಮೆ, ಸೈರಣೆಗಳು ನಮಗೆ ತಿಳಿಯುತ್ತವೆ. ಈ ಕಾರ್ಯಗಳನ್ನು ಅವತಾರಗಳೆಂದು ಗೌರವಿಸುತ್ತಾ, ಶೋಷಿಸುವುದು ತಪ್ಪಾಗುತ್ತದೆ. ಈ ಅವತಾರಗಳಲ್ಲಿ ಸಮಾನತೆ ಬೇಕಿದೆ. ಜೊತೆಯಲ್ಲಿ ನಿರ್ವಹಿಸಬೇಕಾದ ಕರ್ತವ್ಯಗಳಿವೆ. ಕುಟುಂಬವನ್ನು ಗರತಿಯು ಗೌರವಿಸುವ ರೀತಿಯಲ್ಲಿ ಕುಟುಂಬ ಸದಸ್ಯರೂ ಪಾತ್ರರಾಗಬೇಕಾಗುತ್ತದೆ. "ಅತ್ತೆ ಅತ್ತಿಕಾಯಿ ಮಾವ ಮಲ್ಲಿಗೆ ಹೂ, ಬಂಗಾರಗೋಲ ಹಿರಿಭಾವ। ನನ ಮನಿಯ ಅರಿಸೀಣ ಕೆನೆಯು ಅರಸರು॥" ಎನ್ನುವ ಆಕೆಯ ವ್ಯಕ್ತಿತ್ವವು ಕುಟುಂಬದ ಸೌಖ್ಯವನ್ನು ತೋರಿಸುತ್ತದೆ. ಹೆಣ್ಣಿನ ಅವತಾರಗಳಲ್ಲಿ ಹೆಣ್ಣು ಹೆಣ್ಣಿನ ಸೃಷ್ಟಿಯೇ ಶ್ರೇಷ್ಟವಾದುದು ಎಂಬ ವಿಚಾರವನ್ನೂ ಇಲ್ಲಿ ಪ್ರಸ್ತಾಪಿಸಲಾಗಿದೆ. ಆ ವಿಚಾರವನ್ನು ತಿಳಿಸುವ "ಹತ್ತು ಗಂಡ್ಹಡೆದರು ಮತ್ತೆ ಬಂಜೆಂಬರು ದಟ್ಟೀಯ ಉಡುವ ಧರಣೀಯ। ಹಡೆದರೆ ಮಕ್ಕಳ ತಾಯೆಂದು ಕರೆದಾರ॥ ಇಲ್ಲಿ ಅವತಾರಗಳಿಗಾಗಿ ಹೆಣ್ಣಿನ ಅಗತ್ಯವೆಂಬ ಸೂಚನೆಯಲ್ಲಿ ಸೃಷ್ಟಿಯ ಕರ್ತವ್ಯಗಳಿವೆ. ಈ ಸಮಾಜಕ್ಕೆ ಅಗತ್ಯವಿರುವುದು, ಏಕಮುಖವಲ್ಲ. ಹೆಣ್ಣು ಗಂಡಿನ ಬೇಧವಲ್ಲ. ಆದ್ದರಿಂದ ಹೆಣ್ಣು ಹೆತ್ತರೆ ತಾಯಿ ಎನ್ನುವರು ಎಂಬ ಅಪರೂಪದ ತ್ರಿಪದಿಯು ಇನ್ನೂ ಸಮಾಜದ ಕೈಪಿಡಿಗೆ ಸೇರಿಲ್ಲ. ಇಂತಹ ಪದಗಳು ಹೆಣ್ಣಿನ ಮಹತ್ವವನ್ನು ಸ್ಪಷ್ಟವಾಗಿ ತಿಳಿಸುತ್ತವೆ.

**ಕುಟುಂಬ ಸಂಸ್ಥೆ ಹಾಗೂ ಮನೆಯೊಂದು ಆಶ್ರಮ :** ಸಾಮರಸ್ಯದ ಶಾಂತಿಯ ತೋಟವರಳುವುದು ಈ ಕುಟುಂಬದಿಂದಲೇ ಆಗಿದೆ. ನಮ್ಮ ಜನಪದರು ಕುಟುಂಬ–ಸಮಾಜವೆಂಬ ಎರಡು ಮುಖಾಮುಖಿ ಪರಿಕಲ್ಪನೆಗಳಲ್ಲಿ ಬದುಕುತ್ತಿದ್ದಾರೆ. ಕುಟುಂಬ ಚೆನ್ನಾಗಿದ್ದರೆ, ಸಮಾಜವು ಸುರಕ್ಷಿತವಾಗಿರುತ್ತದೆ ಎನ್ನಲಾಗಿದೆ. ಇದಕ್ಕೆ ಕುಟುಂಬದಲ್ಲಿ ಹೆಣ್ಣಿನ ಪಾತ್ರ ಮಹತ್ವಪೂರ್ಣವಾದುದು. ಈ ಹೆಣ್ಣು ಗರತಿಯಾದಾಗ ಮಾತ್ರ ಮಾದರಿಯಾಗಿ ಮಹತ್ವಗಳಿಸುವುದು. "ಹೆಣ್ಣಿನ ಕಾಯವ ಮಣ್ಣು ಮಾಡಲಿ ಬೇಕ, ಸುಣ್ಣಧರಳಾಗಿ ಸುಡಬೇಕ। ಈ ಜನುಮ । ಮಣ್ಣು ಮಾಡಿ ಮೃತ್ಯು ಗೆದಿಬೇಕ॥ ಕುಟುಂಬ ವ್ಯವಸ್ಥೆಯಲ್ಲಿ ಹೆಣ್ಣು ಸವೆಯಬೇಕಾದ ಸ್ವರೂಪವನ್ನು ಕರ್ತವ್ಯದ ಹೆಸರಿನಲ್ಲಿ

ಕಂಠಪಾಠಮಾಡಿಸಲಾಗುತ್ತಿದೆ. ಹೆಣ್ಣು ಸುಣ್ಣಧರಳಾಗಿ ಸುಡುವ ಸವಿಮಾತುಗಳು ಜನಪದರಲ್ಲೂ ಜನಜನಿತವಾಗಿ ಕುಟುಂಬ ವ್ಯವಸ್ಥೆಯ ಶೋಷಣೆಗಳಾಗಿರುವುದನ್ನು ಪ್ರತ್ಯೇಕಿಸಬೇಕಿದೆ.

**ದುಡಿತ ಮಿಡಿತ ಹಾಗೂ ದುಡಿಮೆಗೆ ಹೇಸಿಕೆಯೇ? :** ಈ ವಿಚಾರವು ಹೆಣ್ಣಿನ ದುಡಿಮೆ ಹಾಗೂ ಅದರೊಳಗಿನ ಸಾಹಿತ್ಯದ ಸಮೃದ್ಧಿಯನ್ನು ತಿಳಿಸುತ್ತದೆ. ಗರತಿಯು ತನ್ನ ದುಡಿಮೆಯಲ್ಲಿ ಶ್ರಮ ನಿವಾರಣೆಗಾಗಿ ಹಾಡುಗಳನ್ನು ಹಾಡುವ ಪರಿಯು ವಿಶೇಷ. ನಮ್ಮ ಹಾಡುಗಬ್ಬಗಳು ಸೃಷ್ಟಿಯಾದುದೇ ಹೀಗೆ. ಬೀಸುವಾಗ, ಕುಟ್ಟುವಾಗ ದನಿಯೆತ್ತುವ ಆಕೆಯ ಸ್ವರವು ಕುಟುಂಬದ ಸೌಖ್ಯವನ್ನು, ಸಮಸ್ಯೆಗಳನ್ನು ಆನಂದ ಮತ್ತು ನೋವಿನಿಂದ ಹೊರಹಾಕುತ್ತಿತ್ತು.

ಸುಮ್ಮನೆ ಬೀಸಿದರೆ ಬೀಳದು ಈ ಕಲ್ಲು, ನಾಗಸೊರದಂತೆ ದನಿಯೆತ್ತಿ ಹಾಡಿದರ, ಗಮ್ಮನೆ ಬೀಳುವುದು ಈ ಕಲ್ಲು॥

ಕಲ್ಲಮ್ಮ ಮಾತಾಯಿ ಮೆಲ್ಲಮ್ಮ ರಾಗಿಯ, ಜಲ್ಲಜಲ್ಲನೆ ಉದರಮ್ಮ। ನಾನಿನಗೆ, ಬೆಲ್ಲದಾರತಿಯ ಬೆಳಗೇನು॥

ಹೀಗೆ ಹಲವು ಜನಪದಗೀತೆಗಳಲ್ಲಿ ಗರತಿಯ ಸೌಖ್ಯ ಹಾಗೂ ದುಃಖಗೀತೆಗಳನ್ನು ಸಮ್ಮಿಲನಗೊಳಿಸಲಾಗಿದೆ.

**ಬಾಳ ಜಂಜಾಟ ಹಾಗೂ ಬಾಳ ಪ್ರಸಾದ :** ಕುಟುಂಬದಲ್ಲಿ ಕಷ್ಟದ ಹೊಣೆಯನ್ನು ಹೊರುವವರು ಎಂದರೆ ಪುರುಷರು ಮಾತ್ರವೆಂದು ನಂಬಿಸಲಾಗಿದೆ. ಸರಿಯಾಗಿ ಆಲೋಚಿಸಿದರೆ, ಕಷ್ಟದ ಸ್ವರೂಪವು ಏಕಮುಖವಾಗಿರುವುದಿಲ್ಲ. ನಿತ್ಯವೂ ಕುಟುಂಬದ ಸುಖಕ್ಕಾಗಿ ಅನುಭವಿಸುವ ಹೆಣ್ಣಿನ ತ್ಯಾಗಗಳಿಗೆ ಕಷ್ಟವೆಂಬ ಹೆಸರಿಲ್ಲ ಅದೆಲ್ಲಾ ಕರ್ತವ್ಯವೆಂಬ ಹೆಸರಿನಲ್ಲಿ ನಂಬಿಸಲಾಗಿದೆ. 'ಉತ್ತಮ ಮಗಳೆಂದು, ಸೊಸೆಯೆಂದು' ಕೀರ್ತಿಪಡೆಯಲು ಹೆಣ್ಣು ತನ್ನ ಕಷ್ಟಗಳನ್ನು ಮುಚ್ಚಿಡಲೇ ಬೇಕಾಗುತ್ತದೆ. ಈ ಬಾಳ್ವೆಯನ್ನು ಗರತಿಯೆಂದು ಕರೆಯಲಾಗಿದೆ. ನಾವು ಅದೆಷ್ಟು ಮೂರ್ಖರೆಂದರೆ ಇಂತಹ ಅನರ್ಥ ಚಿಂತನೆಗಳನ್ನು ಮುಂದುವರೆಸುತ್ತೇವೆ. ಈಕೆ ಆ ಕುಟುಂಬಗಳ ದಾಸಿಯೇ ಹೊರೆತು, ಅಲ್ಲಿ ಒಂದು ಹೆಣ್ಣಿನ ಸ್ಥಾನವಾಗಲಿ, ಗರತಿಯ ಬಾಳ್ವೆಯಾಗಲಿ ಸಿಗಲು ಸಾಧ್ಯವಿಲ್ಲ. ಇಲ್ಲಿ ಪ್ರತಿಯೊಬ್ಬರೂ ವಿವೇಚಿಸುವ ಬಾಳ್ವೆಯನ್ನು ಕಲಿಯಬೇಕಿದೆ.

**ಆತ್ಮ ಪೋಷಣಕಾಗಿ:** ಕರ್ತವ್ಯದ ಹೆಸರಲ್ಲಿ ಹೆಣ್ಣು ಬಹುದೊಡ್ಡ ತ್ಯಾಗಿಯಾಗಿದ್ದಾಳೆ. ಮಹಾಸತಿಯಿಂದ ಪ್ರಾರಂಭಿಸಿ, ತನ್ನ ಕುಟುಂಬಕ್ಕಾಗಿ ಇಂದಿಗೂ ಹಲವು ವ್ರತಗಳ ತನಕ ಆತ್ಮಪೋಷಣೆಯೇ ಆಗಿದೆ. ಗರತಿಯ ವ್ಯಕ್ತಿತ್ವದಲ್ಲಿ ಇದು ಬಾಳ್ವೆಯ ಮೌಲ್ಯವನ್ನು ಸಂಕೇತಿಸಿದೆ. ಎಲ್ಲದಕ್ಕೂ ದೇವರನ್ನೂ ಸೂಚಿಸಿ, ತನಗೆ ತಾನು ಶಿಕ್ಷಿಸಿಕೊಳ್ಳುವ ಗುಣವೂ ಗರತಿಯ ಲಕ್ಷಣವಾಗಿರುವುದು ದುರಂತವಾಗಿದೆ. ಇಲ್ಲಿ ವೈಜ್ಞಾನಿಕವಾಗಿ ಕೆಲವು ಲಾಭಗಳಿದ್ದರೂ ಎಲ್ಲಾ ವಿಚಾರದಲ್ಲೂ ವೈಜ್ಞಾನಿಕ ಸತ್ಯಗಳಿಲ್ಲ.

ಏಳುತಲೆ ಎದ್ದು ಯಾರ್‍ಯಾರ ನೆನೆಯಲಿ

ಎಳ್ಳು ಜೀರಿಗೆ ಬೆಳೆಯೋಳೆ। ಭೂಮಿತಾಯೆ

DOI: 10.59176

ಎದ್ದೊಂದು ಗಳಿಗೆ ನೆನೆವೆನು॥ ಈ ಹಾಡು ಪ್ರಾದೇಶಿಕ ವಿಭಿನ್ನತೆಯೊಂದಿಗೆ ಗರತಿಯರ ಗೌರವದ ಸಂಕೇತಸಾರವಾಗಿದೆ. ಹೆಣ್ಣು ತನ್ನ ಕಾರ್ಯಗಳನ್ನು ಮುಂಜಾನೆಯಿಂದ ಕರ್ತವ್ಯ, ದೇವರ ಸೇವೆಯಂತೆ ಪ್ರಾರಂಭಿಸುತ್ತಾಳೆ.

ತಾಯವ್ವ ನೆನೆಯೋದು ಯಾಯಾಳಿ ಯಾಹೊತ್ತು

ಊರೆಲ್ಲ ಉಂಡು ಮಲಗಾನ। ಬೆಳ್ಳಿಚುಕ್ಕಿ।

ಹೊಂಡಾಗ ಅವಳ ನೆನೆದೇನ॥ ರಾತ್ರಿ ಈ ವೇಳೆಗೆ ಮಲಗುವ ತನಕ ಆಕೆ ಮಾಡುವ ಎಲ್ಲಾ ಕಾರ್ಯಗಳು ಬರಿ ಕರ್ತವ್ಯಗಳೇ ಆಗಿವೆ. ಈ ಕರ್ತವ್ಯದಲ್ಲಿ ಆಕೆಗೆ ತನ್ನ ಶೋಷಣೆಯಾಗಲಿ, ಕಷ್ಟಗಳಾಗಲಿ ತಿಳಿಯಂತೆ ಗರತಿಯೆಂಬ ಗೌರವವನ್ನು ಹೊದಿಸಲಾಗಿದೆ. ತನ್ನ ತಾಯನ್ನೂ ಊರೆಲ್ಲಾ ಮಲಗಿದ ಮೇಲೆ ನೆನೆಯುವ ಈಕೆಯ ಕಾಲಚಕ್ರದ ದುಡಿಮೆಯು ಯಾವ ಸ್ವರೂಪದ ಮೌಲ್ಯ ಎಂದು ತಿಳಿಯಬೇಕಿದೆ.

**ಮನಸ್ತರವನು ಮೀರಿ ಹಾಗೂ ಒಲ್ಲದ ಒಗೆತನ :** ಮನಸ್ಸಿನ ಹಂತವನ್ನೂ ಮೀರಿ ಆಕೆಯಲ್ಲಿ ಕೆಲವು ಕನಸುಗಳು ಕೆಲಸಮಾಡುತ್ತವೆ. ಅವುಗಳು ಅತ್ಯಂತ ನಾಜೂಕಾಗಿ ಕರ್ತವ್ಯಗಳನ್ನು ನಿರ್ವಹಿಸುವಂತೆ ಮಾಡುತ್ತವೆ. ದೇವರು ಮನೆಗೆ ಬಂದಂತೆ, ತನಗೆ ಸಹಾಯಮಾಡಿದಂತೆ, ತನ್ನ ಕಾರ್ಯಗಳನ್ನು ನೋಡುತ್ತಿರುವಂತೆ ಎಲ್ಲವೂ ವಿಧಿ, ಲೀಲೆಯ ಹೆಸರಿನಲ್ಲಿ ಗೌರವಿಸುತ್ತವೆ.

**ಪ್ರೇಮ ವಿಕಾಸದ ಪಾಠ :** ಗರತಿಯ ಬಾಳಲ್ಲಿ ಪ್ರೇಮ ವಿಕಾಸದ ಪಾಠವು ವಿರಹ ಹಾಗೂ ಸರಸದ ಕೊಂಡಿಯಾಗಿ ಕಂಡುಬರುತ್ತದೆ. ಒಂದು ಕ್ಷಣವೂ ಬಿಟ್ಟಿರಲಾರದ ಮನೋಚಿಮತನೆಗಳಲ್ಲಿ ಹೆಣ್ಣು ಗಂಡು ಜೊತೆಯಾಗಿ ಬಾಳ್ವೆಮಾಡುತ್ತಾರೆ. ಇಲ್ಲಿ ಸೃಷ್ಟಿಯಾಗುವ ಪ್ರೇಮ ವಿಕಾಸದ ಕುರಿತು ಜನಪದರು ನಗುತ್ತಲೇ ಹಲವು ಹಾಡುಗಳನ್ನು ಹಾಡುತ್ತಾ ಒಂದಿಷ್ಟು ಸಮಾನತೆ ತುಂಬಿದ್ದಾರೆ.

**ತನ್ನಂತೆ ಪರರ ಬಗೆದಡೆ ಹಾಗೂ ತನ್ನಂಗೆ ನೋಡಿದರೆ:** ಗರತಿಯ ಬಾಳಲ್ಲಿ ತನ್ನಂತೆ ಪರರನ್ನು ಬಗೆಯು ಗುಣಗಳೇ ಅಧಿಕ. ಮಗುವೊಂದು ಸೃಷ್ಟಿಯಾಗುವ ತನಕ ತನ್ನ ಬಗೆಗೆ ಯೋಚಿಸುವ ಹೆಣ್ಣು, ತನ್ನ ಗಂಡನ ವರ್ತನೆಗಳನ್ನೇ ಬದಲಿಸಿ, ತನ್ನಾಸೆಗಳ ಕಳಚಿ ತಾನು ಬದುಕುವುದು ಕುಟುಂಬ ಹಾಗೂ ಸಮಾಜಕ್ಕಾಗಿ ಎಂಬ ಮುಗ್ಧ ಪಾಠವನ್ನು ಮಗುವಿನ ಮೂಲಕ ತಿಳಿಸುತ್ತಾಳೆ. ಮಗುವಿಗಾಗಿ ಹಾಲನೀಡುವುದರಿಂದ ಹಾಲಿನಂತ ಬಾಳ್ವೆ ರೂಪಿಸಿಕೊಳ್ಳುವ ತನಕ ಆಕೆಯ ಶ್ರಮ ಸಾಮಾನ್ಯವಾದುದಲ್ಲ. 'ಕೆರೆಯನ್ನು ಕಟ್ಟಿಸು, ಬಾವಿಯನ್ನು ಸವೆಸು, ದೇವಾಗಾರಮಂ ಮಾಡಿಸು' ಎಂಬ ಜನಪದರ ಸಾಹಿತ್ಯವು ಭವಿಷ್ಯವನ್ನು ಸಮಾಜಕ್ಕಾಗಿ ಅಣಿಗೊಳಿಸುವ ಬಗೆಯನ್ನು ಸೂಚಿಸುತ್ತದೆ. ಆದ್ದರಿಂದ 'ತನ್ನಂತೆ ನೋಡಿದರ ಭಿನ್ನಿಲ್ಲ ಭೇದಿಲ್ಲ' ಎಂದು ಗರತಿ ಹಾಡುತ್ತಾಳೆ.

**ಅತ್ತೆಮನೆಯ ಅರಸಿ:** ಹೆಣ್ಣೆಂದರೆ ಒಂದು ಸಸ್ಯದ ನಾಟಿಯಿಂದಂತೆ ಆಕೆಯ ಬಾಳ್ವೆ. ತವರೆಂಬ ಭೂಮಿಯಿಂದ ಸಂಪೂರ್ಣ ಹೊಸ ಭೂಮಿಯಾದ ಗಂಡನ ಮನೆಗೆ ಕಳಿಸುವ ಕಾರ್ಯದಲ್ಲಿ ಆಕೆಯ ಅಸ್ತಿತ್ವದ ಪ್ರಶ್ನೆಯನ್ನು ಕುಟುಂಬಗಳು ಯೋಚಿಸಬೇಕು. ಪರರಂತೆ ಕಾಣುವ, ದಾಸಿಯಂತೆ ದುಡಿಸಿಕೊಳ್ಳುವ, ಅತ್ತೆ–ಸೊಸೆಯ ಕಲಹ

ತರುವ ಜನಪದ ಹಾಡುಗಳಲ್ಲಿ ಗರತಿಯು ತನ್ನ ಅಸ್ತಿತ್ವವನ್ನು ನಾಶಮಾಡಿಕೊಂಡಿದುದೇ ಹೆಚ್ಚು. ಈ ಕಾರಣ ಕುಟುಂಬಗಳು ಹೊಸ ಉದಯದ ಶ್ರೇಷ್ಟ ಕಾರ್ಯವನ್ನು ಅರ್ಥಮಾಡಿಕೊಂಡು ನಿರ್ವಹಿಸಬೇಕಿದೆ.

**ಸಮರಸದತ್ತ ಹಾಗೂ ಕೊಡಹಾಲಿನಲ್ಲಿ ಹರಳುಪ್ಪು:** ಈ ಎರಡೂ ವಿಚಾರಗಳು ವಿಭಿನ್ನ ಹಾಗು ಏಕಮುಖ. ಗರತಿಯ ಬಾಳ್ವೆಯು ಸದಾ ಕಾಲವು ಸಮರಸದ ಆಲೋಚನೆಯನ್ನು ಚಿಂತಿಸುವ, ಹಂಚುವ ಅವಳ ಭಾವಲೋಕವು ಒಂದಾಗಿ ಬಾಳುವ ಗುಣವನ್ನೇ ಕಲಿಸುತ್ತದೆ. ಆದರೆ ಇಂತಹ ಭಾವನೆಗಳನ್ನು ಕೊಡ ಹಾಲಿನಲ್ಲಿ ಹರಳುಪ್ಪು ಹಾಕುವ ಕೆಲವು ಮನಃಸ್ಥಿತಿಗಳು ನಾಶಮಾಡುತ್ತವೆ. ಗರತಿಯಾದವಳು ಸ್ವಯಂ ಯೋಚಿಸುವಂತಿರಬೇಕು. ಅವಳಿಗೆ ಪುರುಷನಂತೆಯೇ ಜವಾಬ್ದಾರಿಗಳು ಇರುತ್ತವೆ. ಅವುಗಳೊಂದಿಗೆ ಹೊಂದುವ ಸಹನಶೀಲತೆ, ನಿರ್ಧಾರಗಳು ಮಹತ್ವಪೂರ್ಣವಾಗಿರುತ್ತವೆ.

**ಕರ್ತಾರನ ಕಮ್ಮಟ, ಬೇಕಾಗಿ ಇರಬೇಕು ಹಾಗೂ ಸೌಜನ್ಯ ಸಿದ್ಧಿ :** ಸಿಂ.ಪಿ ಲಿಂಗಣ್ಣ ಅವರು ಈ ಇಪ್ಪತ್ತು ಅಂಶಗಳನ್ನು ಚರ್ಚಿಸುವಾಗ ತನ್ನ ಕಾಲದ ವೈಚಾರಿಕತೆಯನ್ನು ವಿಶೇಷವಾಗಿ ಧ್ವನಿಸಿದ್ದಾರೆ. ಇಂತಹ ಶ್ರೇಷ್ಠ ಕೃತಿಯೊಂದು ಕಳೆದ ಶತಮಾನದ ಕೊನೆಯಂಚಿಗೆ ರಚನೆಯಾಗಿರುವುದನ್ನು ಗೌರವಿಸಬೇಕು. ಅಂತಿಮವಾಗಿ ಅವರು ವ್ಯಾಖ್ಯಾನಿಸುತ್ತಾ ಹೆಣ್ಣನ್ನು ಗೃಹಿಣಿ ಎನ್ನುವುದಕ್ಕಿಂತ ಗರತಿ ಎನ್ನುವುದು ಶ್ರೇಷ್ಠವಾದುದು ಎಂದು ತಿಳಿಸಿ ಅದುವೇ ಸೌಜನ್ಯ ಸಿದ್ಧಿ ಎಂದಿದ್ದಾರೆ. ಗೃಹವು ಕರ್ತಾರನ ಕಮ್ಮಟದಂತೆ. ಅದು ಸಮಾಜವನ್ನು ರೂಪಿಸುವ ತಳಹದಿಯ ವ್ಯವಸ್ಥೆ. ಇಲ್ಲಿ ಬದುಕುವ ಎಲ್ಲರೂ ಬೇಕಾಗಿ ಇದ್ದಾಗ ಮಾತ್ರ, ಕುಟುಂಬದಲ್ಲಿ ಶ್ರೇಷ್ಠ ಕನಸುಗಳು ಮೂಡುತ್ತವೆ. ಗರತಿಯ ಕರ್ತವ್ಯಗಳು ಬರಿ ಸೇವೆಗಳಾಗದೆ ಕರ್ತಾರನ ಕಮ್ಮಟದ ಕಾರ್ಯಗಳಾಗುತ್ತವೆ. ಪುರುಷನಿಗೂ ಬದಲಾವಣೆ ಬಂದು ಜೊತೆಯಾಗುವ ಶಕ್ತಿ ಮೂಡುತ್ತದೆ.

ಜನಪದ ತ್ರಿಪದಿಗಳು ಹಾಡುಗಳಂತೆ ಮನಸ್ಸನ್ನು ತಣಿಸುತ್ತಲೇ, ಆಲೋಚಿಸುವ ಮಂತ್ರಗಳು ಆಗಿದ್ದವು. ತೆರೆದ ಮನಸ್ಸಿನವರು ಆಲೋಚಿಸಿದರು. ಕೆಲವರು ಬರಿ ಯೋಚಿಸಿದರು. ಇಂದಿಗೂ ಕುಟುಂಬಗಳು ಹೆಣ್ಣನ್ನು ಗರತಿಯ ಮಹತ್ವದಲ್ಲಿ ಕಾಣಲು ಕಷ್ಟವಿರುವುದು ಹಲವು ಕಾರಣಗಳಿಂದ ಎನ್ನಬಹುದು. ಪರಿಸರ ಮತ್ತು ಪ್ರಭಾವವು ಪ್ರತಿಯೊಬ್ಬರನ್ನೂ ರೂಪಿಸುತ್ತವೆ. ಇಲ್ಲಿ ಆಲೋಚಿಸದ ಪರಿಸರಗಳು ಸ್ಥಿತ್ಯಂತರಗೊಳ್ಳದೆ ವಿನಾಶದ ದಾರಿಯನ್ನು ರೂಪಿಸಿಕೊಳ್ಳುತ್ತವೆ. ಸೃಷ್ಠಿಯನ್ನು ಇದರೊಳಗೆ ಸಂಯೋಗಿಸುತ್ತವೆ. ಕಾರಣ ಮನುಷ್ಯನು ಇನ್ನೂ ನಾಗರಿಕನಾಗಿಲ್ಲ. ಗರತಿ ಪರಿಕಲ್ಪನೆಯು ನಾಗರಿಕತೆಯ ಗೌರವ. ಅದನ್ನು ಕಾಣಲು ಬೆಳಕು ಬೇಕು. ಅದು ಜ್ಞಾನದ ವಿಕಾಸದಲ್ಲಿ ಕಾಣಬೇಕು. 1931ಕ್ಕೆ ನೂರು ವರ್ಷಗಳೇ ತುಂಬುವ ಮೊದಲ ಕನ್ನಡ ಜನಪದ ಹಾಡುಗಳ ಕೃತಿಯು ನಮಗೆ ಸ್ವಲ್ಪವಾದರೂ ತಿಳುವಳಿಯನ್ನು ಹಚ್ಚದಿದ್ದರೆ ಶತಮಾನ ಕಳೆದದ್ದೇ ವ್ಯರ್ಥವಾಗುತ್ತದೆ. ಈ ದೃಷ್ಠಿಯಲ್ಲಿ ಮತ್ತೆ ಕೃತಿಯನ್ನು ಪರಿಶೀಲಿಸುವ ಕಾರ್ಯವನ್ನು ನಂತರ ಬಂದಿರುವ ಗರತಿಯ ಬಾಳ ಸಂಹಿತೆಯ ಕೃತಿಯ ತನಕ ನಮ್ಮ ಅಧ್ಯಯನಗಳನ್ನು ವಿಸ್ತರಿಸಿಕೊಳ್ಳಬೇಕಿದೆ. ಇಂದಿಗೂ ಅವುಗಳ ಮಹತ್ವವನ್ನು ಸಂಶೋಧನೆಗಳ ಮೂಲಕ ಜನರ ಬಳಿಗೆ ಹಂಚಬೇಕಿದೆ.

ಸಂಪುಟ ೨, ಸಂಚಿಕೆ ೨, ಸೆಪ್ಟಂಬರ್ ೨೦೨೩ । E-ISSN: 2583-8245
Volume 2, Issue 2, September 2023

**ಟಿಪ್ಪಣಿ :**

* ಗರತಿಯು ತ್ಯಾಗದ ಪುತ್ಥಳಿ, ತನ್ನವರೆಂದರೆ ಆಕೆಯ ಮಮತೆಯ ಚಿನ್ನ. ಪತಿಗೆ ಅರ್ಧಾಂಗಿಯಾಗಿ ಕೂಡುವಳು. ಮಕ್ಕಳಿಗೆ ರಕ್ತ– ರಸಗಳನ್ನು ದಾನವಾಗಿ ಕೊಡುವಳು. ಹುಟ್ಟಿದ ಮನೆಗೆ ಎರವಾಗಿ, ಕೊಟ್ಟ ಮನೆಗೆ ಹೆಸರಾಗುವಳು. 'ತಾವರೆಯ ಗಿಡ ಹುಟ್ಟಿ ದೇವರಿಗೆ ನೆರಳಾದ ಹಾಗೆ, ಆಕೆ ಆಡಿ ಬಂದ ಕಂದನ ಅಂಗಾಲು ತೊಳೆಯುವಳು . ತೆಂಗಿನ ನೀರಿನಿಂದ ಮಗುವಿನ 'ಬಂಗಾರ ಮಾರಿ' ಯನ್ನು ತೊಳೆಯಬಲ್ಲಳು . ತವರವರು ತನ್ನನ್ನು ಸರಮುತ್ತು ಮಾಡಿ ಸಲುಹಿದರೂ, ಅತ್ತೆಯ ಮನೆಯಲ್ಲಿ ಅರವತ್ತು ಗಂಗಾಳಗಳನ್ನು ಬೆಳಗಲಿಕ್ಕೆ ಬೇಸರಿಯಳು. "ಭಾವಯ್ಯ ಮುನಿದರೆ ಬಲಗಾಲ ಹಿಡಿಯಲಿಕ್ಕೂ' 'ಭಾವಯ್ಯನ ಮಡದಿ ನೆಗೆಣ್ಣಿ ಮುನಿದರೆ ಬಾರಕ್ಕನೆಂದು ಕರೆ 'ಯಲಿಕ್ಕೂ ಸಿದ್ಧಳಾಗುವಳು. ಮಾರಾಯರು ಬೈದರೆ ಕಣ್ಣೀರು ಕರೆಯದವಳು"

"ಮಾರಾಯರ ತಮ್ಮ –ಮೈದುನ ಬೈದರೆ 'ಮಾಡಿಲ್ಲದ ಮಳೆ ಸುರಿದಂತೆ' ಅಳುವಳು. ಅತ್ತಿಗೆಯೆಂದರೆ ಆಕೆಯ ಪಾಲಿಗೆ ಹೆತ್ತಾಯಿ ಬೆಣ್ಣೆಯಲ್ಲಿ ಮುಳ್ಳ ಮುರಿದಂತೆ ಮಾತಾಡಿದರೂ ನೆಗೆಣ್ಣಿಯ ಮಾತು ಕ್ಷಮ್ಯವೇ, ಹೊಟ್ಟೆ ಕೂಸು ತೊಡೆಯ ಮೇಲೆ ಮಲಗಿದ್ದರೂ ಬೀಳುವ ಕಾಯಕ ನಡೆಸುವ ಬಂಟಳು, ಶ್ರಮದಲ್ಲಿಯೂ ಹಿಗ್ಗು ಸೂಸುವಳು. ಹಾಡುತ್ತಲೇ ದುಡಿಯುವಳು. ಆಸರಿಕೆ ಅಳೆದಿಟ್ಟವಳು ; ಬೇಸರಿಕೆ ಬಳೆದಿಟ್ಟವಳು. ಆಕೆಯ ತ್ಯಾಗಕ್ಕೆ ಇದಕ್ಕಿಂತಲೂ ಹೆಚ್ಚಿನ ಉದಾಹರಣೆಗಳು ಇನ್ನೇನು ಬೇಕು?"

"ಆಕೆ ಪ್ರೇಮದ ಕಣಿ, ಕೂಲಿ ಮಾಡಿದರೂ ಕೋರಿ ಹೊತ್ತರೂ ಗರತಿಗೆ ಆಕೆಯ ಪತಿಯು ಸರದಾರನೇ, ಅರಸನೇ, ಮಾರಾಯನೇ, ಓರಿಗೆಯ ಪತಿಪುರುಷನು ಹಣಚಿಬಟ್ಟಿನ ಮೇಲೆ ಹರಿದಾಡುವ ಕುಂಕುಮವಿದ್ದ ಹಾಗೆ ; ಅವನಿಂದ ಆ ತವರು ಮರೆಯುವಳು. ಆತನು ಸರದೊಳಗೆ ಇರುವ ಗುಳದಾಳಿಯಂತೆ ಸರ್ವಬಳಗದಲ್ಲಿ ಶ್ರೇಷ್ಠನು ; ಅವನಿಂದ ಸರ್ವ ಬಳಗವನ್ನೂ ಮರೆಯುವಳು . ಆತನ ನಗೆ ಹಚ್ಚಡದ ಪದರೊಳಗಿನ ಅಚ್ಚಮಲ್ಲಿಗೆ ಹೂವಿದ್ದಂತೆ, ಪತಿಯ ರೂಪು ಕಮಲದ ಹೂ ; ಆತನ ಸಹವಾಸ ಮಲ್ಲಿಗೆಯ ಮಾಯೆ, ಬೆಂದಿರುಹಿ ಸಾಗಿದ ರಾಯರ ಕಾಲಹಿಮ್ಮಡ ಕಾಣಿಸಿದರೂ ಅದು ಕಮಲವೇ ; ಚೆಂದಿರನಿಗಿಂತ ಬಲು ಚೆಲುವಾಗಿರುವುದು ! ಅರಸರ ದಯದಿಂದ ದೊರಕೊಂಡ ಅರಿಷಿಣ, ಕುಂಕುಮ, ಗೋದಮಲ್ಲಿಗೆಯ ನನೆದಂಡೆ – ಇವೇ ಆಕೆಯ ಸಕಲೈಶ್ವರ್ಯ ! ಪತಿಯು ಇನ್ನೊಬ್ಬಳನ್ನು ಲಗ್ನವಾಗುವ ಸಂದರ್ಭವು – ಕಾಣಿಸಿಕೊಂಡಾಗ, 'ಮಕ್ಕಳಾಗಲಿಲ್ಲವೆಂದು ಬೇರೊಂದು ಲಗ್ನವೇ, ನಾನು ಚೆಲುವಿಯಲ್ಲವೆಂದು ಇನ್ನೊಬ್ಬಳೊಡನೆ ವಿವಾಹವೇ?' ಎಂದು ಶಂಕಿತಳಾಗಿ ಪತಿದೇವನಲ್ಲಿ ಹೊಟ್ಟೆ ಹೊಕ್ಕು ಹೇಳಿಕೊಳ್ಳುವ ಆಕೆಯ ಮಾತು, ಹೊಟ್ಟೆಯೊಳಗಿನ ಹರಳು ಕರಗಿಸುವಂಥದು! ಹಾಗೆ ಮಾತಾಡುವುದಕ್ಕೆ ಹಿನ್ನೆಲೆ ಯಾವುದೆಂದರೆ – ಅತಿ ಹೃದಯದ ಮಾತು ಹೃದಯಕ್ಕೆ ಅರ್ಥವಾಗುವುದು ॥"

ಸಂಪುಟ ೨, ಸಂಚಿಕೆ ೨, ಸೆಪ್ಟಂಬರ್ ೨೦೨೩ । E-ISSN: 2583-8245
Volume 2, Issue 2, September 2023

- **ವಿಕಿಪೀಡಿಯಾ ಲಿಂಕ್ ಮೂಲ –** https://kn.wikipedia.org/wiki/%E0%B2%97%E0%B2%B0%E0%B2%A4%E0%B2%BF
- **ಬದಲಿಸಿರುವ ಲಿಂಕ್ –** https://kn.wikipedia.org/wiki/%E0%B2%97%E0%B2%B0%E0%B2%A4%E0%B2%BF

**ಪರಮಾರ್ಶನ ಗ್ರಂಥಗಳು:**

1. ಗರತಿಯ ಹಾಡು., ಹಲಸಂಗಿಯ ಚೆನ್ನಮಲ್ಲಪ್ಪ, ಲಿಂಗಪ್ಪ, ರೇವಪ್ಪ ಮೊದಲಾದ ಗೆಳೆಯರು., 1931, 2012., ಸಮಾಜ ಪುಸ್ತಕಾಲಯ, ಧಾರವಾಡ.

2. ಗರತಿಯ ಬಾಳ ಸಂಹಿತೆ., ಸಿಂ.ಪಿ ಲಿಂಗಣ್ಣ., 1986., ಅರವಿಂದ ಪುಸ್ತಕಾಲಯ, ಚಡಚಣ

3. ಅಮರ ಕೋಶ

4. ಕನ್ನಡ ರತ್ನಕೋಶ., 1977, 2012., ಸಾಹಿತ್ಯ ಪರಿಷತ್ತು, ಬೆಂಗಳೂರು